ಮೊಹಮ್ಮದ್ ಯುನುಸ್

ಮತ್ತು

ಗ್ರಾಮೀಣ ಬ್ಯಾಂಕ್



ಮೊಹಮ್ಮದ್ ಯುನುಸ್ ಮತ್ತು ಗ್ರಾಮೀಣ ಬ್ಯಾಂಕ್

ಪಾವುಲಾ ಯೂ

ಚಿತ್ರಗಳು: ಜಾಮೆಲ್ ಅಕಿಬ್




ಮೊಹಮ್ಮದ್ ನ ತಾಯಿ ಅಕ್ಕಿ ಹಿಟ್ಟು, ಸಕ್ಕರೆ ಮತ್ತು ಕೊಬ್ಬರಿಯನ್ನು ಒಂದುಗೂಡಿಸಿ ಸಿಹಿ ಪಿಠಾಕ್ಕಾಗಿ (ಒಂದು ತರಹದ ಸಿಹಿ ಪದಾರ್ಥ) ಕಣಕ ಮಾಡುತ್ತಿರುವದನ್ನು ಕಂಡು ಮೊಹಮ್ಮದ್, ಅವನ ಅಣ್ಣ-ತಮ್ಮ ಮತ್ತು ಅಕ್ಕ-ತಂಗೆಂದಿರ ಬಾಯಿಯಲ್ಲಿ ನೀರೂರತೊಡಗಿತು. ಹೊಟ್ಟೆಯಲ್ಲಿಯ ಹಸಿವು ಕಾಡತೊಡಗಿತು. ಕಣಕದ ಉಂಡೆಯನ್ನು ಚಪ್ಪಟೆ ಮಾಡಿ ಕುದಿಯುತ್ತಿರುವ ಎಣ್ಣೆಯಲ್ಲಿ ಒಂದೊಂದಾಗಿ ಬಿಟ್ಟಾಗ ಅವು ಕಂದು ಬಣ್ಣದ್ದಾಗಿ ತೇಲುತ್ತಿದ್ದವು. ಅವಳು ಅವುಗಳನ್ನು ತಣ್ಣಗೆ ಮಾಡಲು ತಟ್ಟೆಯಲ್ಲಿ ತೆಗೆದು ಇಡುತ್ತಿದ್ದಳು.

ಎಂಟು ವರುಷದ ಮೊಹಮ್ಮದ್ ಮೊದಲನೆಯ ತುತ್ತನ್ನು ಬಾಯಿಯಲ್ಲಿ ಇಡುತ್ತಿದ್ದಾಗ ಬಾಗಿಲಿನ ಕದ ಬಡೆದ ಸಪ್ಪಳವಾಯಿತು. ಎದ್ದು ನೋಡಿದಾಗ ತೆಳ್ಳಗಿನ ಮಹಿಳೆ ಮತ್ತು ಒಂದು ಚಿಕ್ಕ ಹುಡುಗಿ ಬಾಗಿಲಲ್ಲಿ ನಿಂತಿದ್ದರು. ತಾವು ಸಾಕಷ್ಟು ದಿನ ಊಟ ಮಾಡಿಲ್ಲವೆಂದು ಆ ಮಹಿಳೆ ಹೇಳಿದಳು.

ಬಡವರು ತಿನ್ನಲು ಏನೇನು ಇಲ್ಲದಿದ್ದಾಗ ಇವರ ಮನೆಯ ಮುಂದೆ ಬಂದು ನಿಲ್ಲುತ್ತಿದ್ದರು. ಏಕೆಂದರೆ ಮೊಹಮ್ಮದನ ತಾಯಿ ಊಟ, ದುಡ್ಡು, ಇಷ್ಟೇ ಅಲ್ಲ, ತನ್ನ ಮಕ್ಕಳು ದೊಡ್ಡವರಾದಂತೆ ಅವರ ಹಳೆ ಬಟ್ಟೆ ಕೊಡುತ್ತಾಳೆಂಬುದು ಎಲ್ಲರಿಗೂ ಗೊತ್ತಿತ್ತು. ಮೊಹಮ್ಮದ್ ನಿಗೆ ಕೂಡ ತನ್ನ ಹಸಿವೆಗಿಂತ ಮನೆಯ ಎದುರಿಗೆ ಬಂದು ನಿಂತವರಿಗೆ ಅನ್ನ ಬೇಕು ಎಂಬುದರ ಅರಿವು ಇತ್ತು. ಆದ್ದರಿಂದ ಆತನು ಅವರಿಬ್ಬರಿಗೂ ತನ್ನ ತಾಟಿನಲ್ಲಿಯ ಆಹಾರವನ್ನು ಕೊಟ್ಟನು. ಅವರು ಕೊನೆ ಅಗುಳುಕೂಡ ನೆಕ್ಕಿ ತಿಂದರು. ಮೊಹಮ್ಮದ್ ನ ತಾಯಿಗೆ ಸಂತಸವಾಯಿತು.





ಮೊಹಮ್ಮದ್ ಯುನುಸ್ ಇವರು ಜೂನ 26, 1940ರಂದು ಹುಟ್ಟಿದರು. ಒಂಬತ್ತು ಮಕ್ಕಳಲ್ಲಿ ಅವರು ಮೂರನೆಯವರು. ಅವರ ಬಂಗಾಲಿ ಕುಟುಂಬವು ಚಿತ್ತಾಂಗ್ ದಲ್ಲಿಯ ಒಂದು ಎರಡಂತಸ್ತಿನ ಮನೆಯಲ್ಲಿ ಇರುತ್ತಿತ್ತು. ಚಿತ್ತಾಂಗ್ ಆಗ ಭಾರತ ದೇಶದ ಭಾಗವಾಗಿತ್ತು. ಈಗ ಅದು ಬಾಂಗ್ಲಾ ದೇಶದ ಭಾಗವು. ಚಿತ್ತಾಂಗ್ ಇದು ಬಹು ಜನದಟ್ಟಣೆಯ ಗದ್ದಲದ ಪಟ್ಟಣ. ಬಣ್ಣದ ರಿಕ್ಷಾಗಳಿಂದ ಮತ್ತು ಸಾಮಾನು ಸಾಗಿಸುವ ಟ್ರಕ್ಕುಗಳಿಂದ ಪಟ್ಟಣದ ಇಕ್ಕಟ್ಟಾದ ದಾರಿಗಳೆಲ್ಲ ತುಂಬಿಹೋಗುತ್ತಿದ್ದವು. ಜನನಿಬಿಡವಿರುವ ಈ ದಾರಿಗಳಲ್ಲಿ ಬಿಕ್ಕೆ ಬೇಡುತ್ತ ತಿರುಗುವ ತಿರುಕರು ಮತ್ತು ಚಿಕ್ಕ ಪುಟ್ಟ ಉದ್ಯೋಗ ಮಾಡುತ್ತಿರುವ ಉದ್ದಿಮೆದಾರರು ಒಟ್ಟಾರೆ ತಿರುಗುತ್ತಿದ್ದರು. ಜನ ಹೋಟಲ್ ಎದುರಿಗೆ, ದಾರಿಯಲ್ಲಿ ನಿಂತೇ ಚಹ-ತಿಂಡಿಗಳನ್ನು ತಿನ್ನುತ್ತಿದ್ದರು. ಮೊಹಮ್ಮದ ಮತ್ತು ಅವರ ಬಳಗವು ಚಿಕ್ಕಂದಿನಲ್ಲಿ ಏನಾದರೂ ಆಟವಾಡುತ್ತ ಮೋಜು ಮಾಡುತ್ತಿದ್ದರು. ತಾವು ಸೈನಿಕರೆಂದು ನಟನೆ ಮಾಡುತ್ತ ಮನೆಗಳ ಚಪ್ಪರದ ಮೇಲೆ ಓಡಾಡುತ್ತಿದ್ದರು. ಬಿದಿರು ಮತ್ತು ಕಾಗದಗಳಿಂದ ಮಾಡಿದ ಗಾಳಿಪಟವನ್ನು ಹಾರಿಸುತ್ತಿದ್ದರು. ಕೆಲ ಸಲ ಚಿತ್ರಪಟ ನೋಡಲು ಕೂಡ ಹೋಗುತ್ತಿದ್ದರು.








ಮೊಹಮ್ಮದನ ಪಾಲಕರಿಗೆ ಶಿಕ್ಷಣದ ಮಹತ್ವ ತಿಳಿದಿತ್ತು. ಅವರಿಗೆ ತಮ್ಮ ಮಕ್ಕಳು ಶಿಕ್ಷಣದಲ್ಲಿ ಮುಂದೆ ಹೋಗಲು ಮನಸ್ಸುಗೊಟ್ಟು ಅಭ್ಯಾಸ ಮಾಲೇಬೇಕು ಎಂಬುದರ ಮೇಲೆ ನಂಬಿಕೆ ಇತ್ತು. ಮೊಹಮ್ಮದನ ತಂದೆ, ದುಲಾ ಮಿಯಾ, ಯಶಸ್ವಿ ರತ್ನದ ವ್ಯಾಪಾರಿ ಇದ್ದರೂ ಅವರು ಎಂಟನೇ ತರಗತಿಯವರೆಗೆನೇ ಕಲಿತಿದ್ದರು. ತಾಯಿ ಸೋಫಿಯಾ ಖಾತುನ ಇವರ ಶಿಕ್ಷಣ ನಾಲ್ಕನೆ ಇಯತ್ತೆಯವರೆಗೆ ಆಗಿದ್ದರೂ ಅವರಿಗೆ ಯಾವಾಗಲೂ ಮಕ್ಕಳಿಗೆ ಕತೆಯ ಪುಸ್ತಕಗಳನ್ನು ಓದಿ ಹೇಳುವದರಲ್ಲಿ ತುಂಬಾ ಇಷ್ಟ. ಪಾಲಕರಿಬ್ಬರಿಗೂ ತಮ್ಮ ಮಕ್ಕಳು ಶಾಲೆ ಮುಗಿಸಿ ಒಂದು ದಿನ ಕಾಲೇಜು ಕಟ್ಟೆಯನ್ನು ಹತ್ತುವರು ಎಂಬುದರ ಆಸೆ.

ದುಲಾ ಮಿಯಾ ತಮ್ಮ ಮಕ್ಕಳು ಸ್ಕಾವುಟನಂತಹ ಬೇರೆ ಬೇರೆ ಚಟುವಟಿಕೆಗಳಲ್ಲಿ ಭಾಗವಹಿಸಲು ಉತ್ತೇಜನ ಕೊಡುತ್ತಿದ್ದರು. ಜಗತ್ತಿನಲ್ಲಿಯ ಕಲಿಕೆಗಿಂತ ದೊಡ್ಡ ಕಲಿಕೆ ಮತ್ತೊಂದಿಲ್ಲ ಎಂದು ಅವರು ಮಕ್ಕಳಿಗೆ ಹೇಳುತ್ತಿದ್ದರು.





ಮೊಹಮ್ಮದನಿಗೆ ಸ್ಕಾವುಟ ಸಾಕಷ್ಟು ಸೇರುತ್ತಿತ್ತು, ಆಟವಾಡಲು, ಸುತ್ತಮುತ್ತಲಿನ ಹಳ್ಳಿಗಳಲ್ಲಿ ತಿರುಗಾಡಲು, ಸ್ಕಾವುಟದ ಕೌಶಲ್ಯಗಳನ್ನು ಕಲಿಯಲು ಆಸ್ಪದವಿರುತ್ತಿತ್ತು. ಇವುಗಳ ಜೊತೆಗೆ ಸಮಾಜದಲ್ಲಿಯ ಬಡಬಗ್ಗರಿಗೆ ನೆರವಾಗಲು ದೊರೆಯುತ್ತಿತ್ತು. ಕೆಲವು ಸಲ ಸ್ಕಾವುಟಕ್ಕಾಗಿ ಹೊರಗಡೆ ಹೋದಾಗ ಕೊಳಗೇರಿಯಲ್ಲಿ ವಾಸಿಸುವ ಬಡವರ ಬವಣೆಯನ್ನು ಕಂಡು ಮೊಹಮ್ಮದನಿಗೆ ನೋವಾಗುತ್ತಿತ್ತು. ಬಿದಿರು-ಹುಲ್ಲು-ಹಳೆ ತಗಡು-ರಟ್ಟು ಮುಂತಾದವುಗಳಿಂದ ಕಟ್ಟಿದ ಚಿಕ್ಕ ಚಿಕ್ಕ ಮನೆಗಳಲ್ಲಿ ಹತ್ತಾರು ಜನರ ಕುಟುಂಬಗಳನ್ನು ಕಂಡು ಅವನಿಗೆ ದುಃಖವಾಗುತ್ತಿತ್ತು. ಇಂತಹ ಗುಡಿಸಲು ಕೂಡ ಇಲ್ಲದಿದ್ದ ತಾಯಂದಿರು ಮಕ್ಕಳನ್ನು ಕಟ್ಟಿಕೊಂಡು ಹೋಲಸು ತುಂಬಿ ಹರಿಯುವ ಕೊಳಚೆಯಲ್ಲಿಯೇ ವಾಸಿಸುತ್ತಿದ್ದರು. ಅವರಿಗೆ ಕುಡಿಯಲು ಶುದ್ಧ ನೀರು ಮತ್ತು ತಿನ್ನಲು ಹೊಟ್ಟೆ ತುಂಬ ಅನ್ನ ಕೂಡ ದೊರೆಯುತ್ತಿರಲಿಲ್ಲ.

ಮೊಹಮ್ಮದನು ದಯಾಧರ್ಮದ ಚಟುವಟಿಕೆಗಳಲ್ಲಿ ಉತ್ಸಾಹದಿಂದ ಕೆಲಸ ಮಾಡುತ್ತಿದ್ದನು. ಸ್ಕಾವುಟದ ಸ್ವಯಂಸೇವಕರು ಬಿಡುವಿನ ದಿನಗಳಲ್ಲಿ, ಬೂಟುಗಳಿಗೆ ಪಾಲಿಶ ಮಾಡಿ ಇಲ್ಲವೆ ಪುಸ್ತಕಗಳ ಮಾರಾಟ ಮಾಡಿ ಬಡವರಿಗಾಗಿ ಹಣವನ್ನು ಶೇಖರಿಸುತ್ತಿದ್ದರು. ಇಂತಹ ಚಿಲ್ಲರೆ ದುಡ್ಡಿನಲ್ಲಿ ಕೊಂಡು ತಂದ ಅಕ್ಕಿಯ ಮೇಲೆ ಕೂಡ ಈ ಜನರು ವಾರಗಟ್ಟಲೆ ಜೀವಿಸುವದನ್ನು ಮೊಹಮ್ಮದ್ ನೋಡುತ್ತಿದ್ದನು.

ಮೊಹಮ್ಮದ್ ದೊಡ್ಡವನಾದಂತೆ ಆತನಿಗೆ ಬಡತನದಲ್ಲಿ ಆಯುಷ್ಯ ಕಳೆಯುತ್ತಿರುವವರ ಸಲುವಾಗಿ ಏನಾದರೂ ಮಾಡಲೇಬೇಕು ಎಂದೆನ್ನಿಸತೊಡಗಿತು. 1957ರಲ್ಲಿ, ತನ್ನ ಹದಿನೇಳನೆ ವಯಸ್ಸಿನಲ್ಲಿ ಆತ ಢಾಕಾ ವಿಶ್ವವಿದ್ಯಾಲಯದಲ್ಲಿ ಅರ್ಥಶಾಸ್ತ್ರ ಕಲಿಯಲು ಹೆಸರು ನೋಂದಾಯಿಸಿದನು. ಹಣ, ವಸ್ತು ಮತ್ತು ಸೇವೆ ಇವುಗಳನ್ನು ಜನ ಹೇಗೆ ಉಪಯೋಗಿಸುತ್ತಾರೆ ಎಂಬುದನ್ನು ಅರ್ಥಶಾಸ್ತ್ರವು ಕಲಿಸುವದು. ಬಡವರಿಗೆ ತಮ್ಮ ಹಣವನ್ನು ಸರಿಯಾಗಿ ಉಪಯೋಗ ಮತ್ತು ಹಣದ ಉಳಿತಾಯ ಮಾಡಲು ಈ ಅಭ್ಯಾಸದಿಂದ ಕಲಿಯಲು ಸಿಗಬಹುದೆಂದು ಮೊಹಮ್ಮದನ ಎಣಿಕೆ.



ಢಾಕಾ ವಿಶ್ವವಿದ್ಯಾಲಯದ ಪದವಿ ಗಳಿಸಿದ ನಂತರ ಆತ ಅಲ್ಲಿಯೇ ಸಂಶೋಧನೆ ಸಹಾಯಕ ಮತ್ತು ಅಧ್ಯಾಪಕನಾಗಿ ಕೆಲಸ ಮಾಡತೊಡಗಿದನು. 1965ರಲ್ಲಿ ಅಮೇರಿಕೆಯಲ್ಲಿ ಅರ್ಥಶಾಸ್ತ್ರವನ್ನು ಅಭ್ಯಸಿಸಲು ಫುಲ್ ಬ್ರಾಯಿಟ್ ಶಿಷ್ಯವೃತ್ತಿ ದೊರೆಯಿತು. ಅಲ್ಲಿಯ ಕಾಲೇಜಿನಲ್ಲಿ ಕಲಿಯುತ್ತಿದ್ದಾಗ ವಿಯೆಟ್ನಾಮ ಯುದ್ಧದ ವಿರುದ್ಧ ವಿದ್ಯಾರ್ಥಿಗಳು ಜೋರಾಗಿ ಪ್ರತಿಭಟನೆ ಮಾಡುತ್ತಿರುವದನ್ನು ಆತನು ನೋಡುತ್ತಿದ್ದನು. ತಮ್ಮ ಮಾತು ಕೇಳುವತನಕ ಎದ್ದೇಳುವದಿಲ್ಲವೆಂದು ಪಟ್ಟು ಹಿಡಿದು ಕುಳಿತುಕೊಳ್ಳುತ್ತಿದ್ದರು. ಮೌನದಿಂದ ಪೀಸ ಮೇರವಣಿಗೆಯಲ್ಲಿ ಭಾಗವಹಿಸುತ್ತಿದ್ದರು. ಮೊಹಮ್ಮದ್ ನಿಗೆ ಇದೆಲ್ಲದರ ಬಗ್ಗೆ ಸಾಕಷ್ಟು ಆಶ್ಚರ್ಯವಾಗುತ್ತಿತ್ತು. ಇಂಥವುಗಳಿಂದ ಬದಲಾವಣೆಯಾಗುವದರಲ್ಲಿ ನಂಬಿಕೆ ಹುಟ್ಟತೊಡಗಿತು. ಆತನಿಗೆ ಆಗ ಅವನ ತಂದೆಯ ನುಡಿಗಳ ನೆನಪು ಆಗುತ್ತಿತ್ತು. ಅವನು ನಿಜವಾಗಿ ಜಗತ್ತಿನಿಂದ ಕಲಿಯತೊಡಗಿದ್ದನು



1970ರಲ್ಲಿ ಮಿಡಲ್ ಟೆನೆಸಿ ಸ್ಟೇಟ ಯುನಿವ್ಹರ್ಸಿಟಿಯಲ್ಲಿ ಶಿಕ್ಷಕನೆಂದು ಕೆಲಸ ಮಾಡತೊಡಗಿದರು. ಅಮೇರಿಕೆಯಲ್ಲಿಯ ಅವರ ಜೀವನ ಸುಖಕರವಾಗಿದ್ದರೂ ಕೂಡ ತಮ್ಮ ದೇಶದಲ್ಲಿಯ ಹದಗೆಟ್ಟುತ್ತಿರುವ ಸ್ಥಿತಿಯ ಬಗ್ಗೆ ಅವರಿಗೆ ಕಳವಳ ಉಂಟಾಗುತ್ತಿತ್ತು. 1947ರಲ್ಲಿ ಬ್ರಿಟಿಶರ ಆಢಳಿತೆ ಮುಗಿದ ನಂತರ ಚಿತ್ಗಾಂಗ್ ಮೊದಲು ಪೂರ್ವ ಬಂಗಾಲ, ಆಮೇಲೆ ಅದು ಪೂರ್ವ ಪಾಕಿಸ್ತಾನದ ಭಾಗವಾಯಿತು. ಈ ಪ್ರದೇಶದಲ್ಲಿ ಬಂಗಾಲಿ ಜನಸಂಖ್ಯೆ ಹೆಚ್ಚು ಪ್ರಮಾಣದಲ್ಲಿ ಇತ್ತು. ಈ ಪ್ರದೇಶದ ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಸ್ಥಿತಿಗಳಲ್ಲಿ ಎದ್ದು ಕಾಣುವಷ್ಟು ವ್ಯತ್ಯಾಸಗಳಿರುವದರಿಂದ ಪೂರ್ವ ಪಾಕಿಸ್ತಾನದಿಂದ ಸ್ವತಂತ್ರರಾಗಬೇಕೆಂದು ಅಲ್ಲಿಯ ಬಂಗಾಲಿ ಜನರಿಗೆ ಅನ್ನಿಸುತ್ತಿತ್ತು. 1971ರಲ್ಲಿ ಈ ಪ್ರದೇಶ ಸ್ವತಂತ್ರವಾಗಿ ಬಾಂಗ್ಲಾದೇಶವೆಂದು ಅಸ್ತಿತ್ವಕ್ಕೆ ಬಂದಿತು. ಈ ಹೊಸ ಬಾಂಗ್ಲಾದೇಶ ಮತ್ತು ಪಾಕಿಸ್ತಾನದ ನಡುವೆ ಸ್ಥಿತಿ ಹದಗೆಟ್ಟು ಯುದ್ಧದ ಪರಿಸ್ಥಿತಿಗೆ ಎದುರಾಗಬೇಕಾಯಿತು.

ತಮ್ಮ ಬಾಂಧವರ ಹೋರಾಟಕ್ಕೆ ಸಹಾನುಭೂತಿ ದೊರಕಿಸಲು ಮೊಹಮ್ಮದ್ ಇವರು ವಿಶ್ವವಿದ್ಯಾಲಯದಲ್ಲಿ ನಿದರ್ಶನಗಳ ಏರ್ಪಡೆ ಮಾಡಿದರು. ಅಮೇರಿಕೆಯ ರಾಜಧಾನಿಯಾದ ವಾಶಿಂಗ್ಟನ್ ಕ್ಕೆ ಪ್ರಯಾಣ ಮಾಡಿ ಅಲ್ಲಿಯ ಕ್ಯಾಪಿಟಲ್ ಹಿಲ್ ದ ಎದುರಿಗೆ ಪಾಕಿಸ್ತಾನ ಮತ್ತು ಬಾಂಗ್ಲಾ ದೇಶಗಳ ನಡುವೆ ಶಾಂತಿ ಸೌಹಾರ್ದ ನೆಲೆಸಲು ಪ್ರಯತ್ನಿಸಬೇಕೆಂದು ಒತ್ತಾಯ ಮಾಡುತ್ತಿದ್ದ ಬಂಗಾಲಿಗಳ ನಿದರ್ಶನೆಗಳಲ್ಲಿ ಪಾಲುವಹಿಸಿದರು. ತಮ್ಮ ಮಾತೃಭೂಮಿಯಲ್ಲಿಯ ಪರಿಸ್ಥಿತಿಯನ್ನು ಜಗತ್ತಿಗೆ ತಿಳಿಸಲು ವೃತ್ತಪತ್ರ ಮತ್ತು ಟೆಲಿವ್ಹಿಜನ್ ಗಳ ಮುಖಾಂತರ ತಮ್ಮ ಹೇಳಿಕೆಯನ್ನು ನೀಡಿದರು.






ಬಾಂಗ್ಲಾದೇಶವು ಪಾಕಿಸ್ತಾನವನ್ನು ಸೋಲಿಸಿ 16 ಡಿಸೆಂಬರ 1971ರಲ್ಲಿ ಸ್ವತಂತ್ರ ರಾಷ್ಟ್ರವೆಂದು ಮನ್ನಣೆ ಪಡೆಯಿತು. ಈ ಯುದ್ಧದಲ್ಲಿ ಸುಮಾರು ಮೂರು ಲಕ್ಷ ಜನರು ಮೃತಗೊಂಡಿರಬಹುದು. ಯುದ್ಧ ಮತ್ತು ಆ ಕಾಲದಲ್ಲಿಯೇ ಅನಾವೃಷ್ಟಿ ಮತ್ತು ಬರದಿಂದಾಗಿ ಈ ಹೊಸ ರಾಷ್ಟ್ರ ತತ್ತರಿಸಿ ಹೋಯಿತು. ಮೊಹಮ್ಮದ್ ನಿಗೆ ತಿರುಗಿ ತಮ್ಮ ದೇಶಕ್ಕೆ ಹೋಗಬೇಕೆಂದು ಅನ್ನಿಸತೊಡಗಿತು. 1972ರಲ್ಲಿ ಆತನು ಚಿತ್ತಾಂಗ್ ವಿದ್ಯಾಪೀಠದಲ್ಲಿ ಅರ್ಥಶಾಸ್ತ್ರದ ಪ್ರಾಧ್ಯಾಪಕನೆಂದು ಸೇರಿಕೊಂಡನು

ಮೊಹಮ್ಮದ್ ಈ ಯುದ್ಧವು ದೇಶವನ್ನು ಹೇಗೆ ಹಾಳುಮಾಡಿತು ಎಂಬುದನ್ನು ಕಣ್ಣಾರೆ ಕಂಡರು. ದಿನಾಲು ಮುಂಜಾನೆ ವಿದ್ಯಾಪೀಠಕ್ಕೆ ಹೋಗಬೇಕಾದರೆ ಜೋಬ್ರಾ ಎಂಬ ಹಳ್ಳಿಯನ್ನು ಹಾಯ್ದು ಹೋಗಬೇಕಾಗುತ್ತಿತ್ತು. ಬರಗಾಲದಿಂದಾಗಿ ಹೊಲದಲ್ಲಿಯ ಬೆಳೆಗಳೆಲ್ಲ ಸುಟ್ಟುಹೋಗಿದ್ದವು. ಹಳ್ಳಿಗರಿಗೆ ತಿನ್ನಲು ಅನ್ನವಿರಲಿಲ್ಲ. ಕುಡಿಯಲು ನೀರಿರಲಿಲ್ಲ. ಬರಿಗಾಲಿನಿಂದ ನಡೆಯುವ ಮಕ್ಕಳು ತಮ್ಮ ತಂದೆ-ತಾಯಂದಿರ ಜೊತೆ ಸಮೀಪದ ಗುಡ್ಡಕ್ಕೆ ಏನಾದರೂ ತಿನ್ನಲು ದೊರೆಯಬಹುದೆಂದು ಹೋಗುತ್ತಿದ್ದವು. ಕೆಲವರು ಗಿಡ-ಗಂಟಿ ಮತ್ತು ಬೇರುಗಳನ್ನು ತಿಂದು ತಿರುಗಿ ಬರುತ್ತಿದ್ದರು.





ಮೊಹಮ್ಮದ್ ಇವರಿಗೆ ಈ ಬಡತನ ನೋಡಿ ಬಹಳ ಕೆಡುಕೆನ್ನಿಸುತ್ತಿತ್ತು. ಈ ಹಳ್ಳಿಯಲ್ಲಿಯ ಜನ ಈ ರೀತಿಯಾಗಿ ಕಷ್ಟದಲ್ಲಿದ್ದಾಗ ನಾನೇಕೆ ಕ್ಲಾಸರೂಮದಲ್ಲಿ ಅರ್ಥಶಾಸ್ತ್ರ ಕಲಿಸುತ್ತೇದ್ದೇನೆ? ಜೋಬ್ರಾ ಕೂಡ ಅವರ ಪಾಲಿಗೆ ಕ್ಲಾಸರೂಮ ಆಯಿತು. ಮುಂದಿನ ಕೆಲ ವರುಷ ಅಲ್ಲಿಯ ಅಳಿದುಳಿದ ಕುಟುಂಬಗಳ ಜೊತೆ ಮಾತನಾಡಿ ಅವರ ಕಷ್ಟ ಕಾರ್ಪಣ್ಯಗಳನ್ನು ತಿಳಿದುಕೊಳ್ಳುವ ಪ್ರಯತ್ನ ಅವರು ಮಾಡತೊಡಗಿದರು.

1976ರಲ್ಲಿ ಅವರಿಗೆ ಸುಫಿಯಾ ಬೇಗಮ ಎಂಬ ತರುಣಿಯ ಪರಿಚಯವಾಯಿತು. ಅವಳ ಮಕ್ಕಳು ಅವಳ ಜೊತೆ ಒಂದು ಮಣ್ಣಿನ ಗುಡಿಸಲಿನಲ್ಲಿ ಇರುತ್ತಿದ್ದವು. ಮಕ್ಕಳು ಮಲಗಿಕೊಂಡಾಗ ಅವಳು ಬಿದಿರಿನಿಂದ ಒಳ್ಳೆಯ ವಸ್ತುಗಳನ್ನು ಮಾಡುತ್ತಿದ್ದಳು. ಸರಿಯಾಗಿ ಊಟವಿಲ್ಲದ್ದರಿಂದ ಅವಳು ಬಹು ತೆಳ್ಳಗೆ ಇದ್ದಳು. ಆದರೆ ಅವಳಲ್ಲಿ ಒಂದು ಕಲೆ ಇತ್ತು. ಅದು ಮೊಹಮ್ಮದ್ ಇವರಿಗೆ ಬಹು ಮೆಚ್ಚಿಗೆಯಾಯಿತು



ಸುಫಿಯಾನಂತೆ ಸಾಕಷ್ಟು ಮಹಿಳೆಯರು ತಾವು ಮಾಡಿದ ಚಂದ ಚಂದದ ಕಲಾ ಕುಸುರಿನ ವಸ್ತುಗಳ ಮಾರಾಟ ಮಾಡಿ ಉಪಜೀವಿಕೆ ಸಾಗಿಸುತ್ತಿದ್ದದ್ದು ಸುಫಿಯಾನಿಂದ ಮೊಹಮ್ಮದ್ ಇವರಿಗೆ ಗೊತ್ತಾಯಿತು. ಈ ವಸ್ತುಗಳಿಗಾಗಿ ಬೇಕಾಗುವ ಬಿದಿರನ್ನು ಕೊಳ್ಳುವಷ್ಟು ಐದು ಟಾಕಾ (ಐದು ರೂಪಾಯಿ)) ಕಾಸು ಕೂಡ ಅವರ ಹತ್ತಿರವಿರಲಿಲ್ಲ. ಅದಕ್ಕಾಗಿ ಯಾರಿಂದಲಾದರೂ ಸಾಲ ಪಡೆಯಬೇಕಾಗುತ್ತಿತ್ತು.

ಜೋಬ್ರಾದಲ್ಲಿದ್ದ ಬ್ಯಾಂಕುಗಳು ಇಂತಹ ಚಿಲ್ಲರೆ ಮೊತ್ತದ ಸಾಲ ಕೊಡಲು ಒಪ್ಪುತ್ತಿರಲಿಲ್ಲ. ಬಡವರ ಹತ್ತಿರ ಯಾವದೇ ಗ್ಯಾರಂಟಿ ಇಲ್ಲದ ಮೂಲಕ ಅವರಿಗೆ ಬ್ಯಾಂಕಿನಲ್ಲಿ ಪ್ರವೇಶವಿರಲಿಲ್ಲ. ಇದರಿಂದಾಗಿ ಹಳ್ಳಿಯಲ್ಲಿಯ ಮಹಾಜೊನನ (ಸಾಲ ಕೊಡುವ ಸಾಹುಕಾರ) ಮೊರೆ ಹೋಗಬೇಕಾಗುತ್ತಿತ್ತು. ಸುಫಿಯಾ ತೆಗೆದುಕೊಂಡ ಐದು ಟಾಕಾ ಸಾಲಕ್ಕೆ ಎರಡು ಮೂರು ಪಟ್ಟು ಬಡ್ಡಿ ತೆರಬೇಕಾಗುತ್ತಿತ್ತು. ಮಹಾಜೊನನು ಸುಫಿಯಾನಂತಹರ ಪರಿಸ್ಥಿತಿಯ ಅನುಚಿತ ಲಾಭ ಗಳಿಸುತ್ತಿದ್ದನು. ಸಾಲದ ಮೇಲೆ ಸಾಕಷ್ಟು ಪ್ರಮಾಣದಲ್ಲಿ ಬಡ್ಡಿ ಹೇರಿ ಸಾಲದ ವಸೂಲಿ ಮಾಡುತ್ತಿದ್ದನು.

ಸುಫಿಯಾ ತಾನು ಮಾಡಿದ ಬಿದಿರಿನ ವಸ್ತುಗಳನ್ನು ಮಾರಿ ಬಂದ ದುಡ್ಡಿನಲ್ಲಿ ಮಹಾಜೊನನ ಸಾಲ ಮತ್ತು ಬಡ್ಡಿಯನ್ನು ತಿರುಗಿ ಕೊಟ್ಟಮೇಲೆ ಇಡೀ ಕುಟುಂಬದ ಹೊಟ್ಟೆ ತುಂಬಲು ಖರ್ಚಿಗೆಂದು ಅವಳ ಕೈಯಲ್ಲಿ ಕೇವಲ ಎರಡು ಟಾಕಾದಷ್ಟೇ ದುಡ್ಡು ಉಳಿಯುತ್ತಿತ್ತು. ಹೀಗಾಗಿ ಮತ್ತೇ ಮರುಸಲ ಮಹಾಜೊನನ ಹತ್ತಿರ ಸಾಲ ಪಡೆಯಲು ಹೋಗಬೇಕಾಗುತ್ತಿತ್ತು. ಹೀಗೆ ಈ ಚಕ್ರವು ನಿಲ್ಲುತ್ತಿರಲಿಲ್ಲ.





ಸುಫಿಯಾಳ ಆಯುಷ್ಯವೆಲ್ಲ ಕೆಲ ರೂಪಾಯಿಗಳ ಮೇಲೆ ಅವಲಂಬಿಸಿದೆ ಎಂಬುದರ ಮನವರಿಕೆ ಮೊಹಮ್ಮದ್ ಇವರಿಗೆ ಆಯಿತು. ಅವರು ತನ್ನ ಕಿಸೆಯಲ್ಲಿ ಕೈಹಾಕಿದರು. ಕಿಸೆಯಲ್ಲಿಯ ನಾಣ್ಯಗಳು ಸಪ್ಪಳ ಮಾಡಿದವು. ಅವರು ಅವಳಿಗಾಗಿ ಬಿದಿರು ಕೊಳ್ಳಲು 20-25 ರೂಪಾಯಿ ಸಹಜವಾಗಿ ಕೊಡಬಹುದಿತ್ತು. ಮಹಾಜೊನನ ಕಪಿಮುಷ್ಟಿಯಿಂದ ಹೊರಬೀಳಿಸಬಹುದಿತ್ತು. ಮತ್ತು ತನ್ನ ಲಾಭವನ್ನು ತಾನೇ ಇಟ್ಟುಕೊಳ್ಳಬಹುದಿತ್ತು.



ಆದರೆ ಮೊಹಮ್ಮದ್ ದುಡ್ಡು ಕೊಡಲು ಒಂದಿಷ್ಟು ಅಳುಕಿದರು. ಸುಫಿಯಾಳಿಗೆ ದುಡ್ಡು ಕೊಟ್ಟರೆ ಅವಳು ದುಡ್ಡಿಗಾಗಿ ಬೇರೆಯವರ ಮುಂದೆ ಯಾವಾಗಲೂ ಕೈ ಒಡ್ಡಿ ನಿಲ್ಲಬೇಕಾಗುವದು. ಅವಳಿಗೆ ಐದು ರೂಪಾಯಿ ಕೊಡುವದು ಸಮಸ್ಯೆಯ ಪರಿಹಾರವಲ್ಲ. ಅವಳನ್ನು ಈ ಬಡತನದ ಸುಳಿಯಿಂದ ಹೊರತರುವ ಉಪಾಯ ಕಂಡು ಹಿಡಿಯುವದೇ ಈ ಸಮಸ್ಯೆಯ ಪರಿಹಾರ.

ಮರುದಿನ ತಾವು ಕಲಿಸುತ್ತಿದ್ದ ವಿದ್ಯಾರ್ಥಿಗಳ ತಂಡವನ್ನು ಜೋಬ್ರಾ ಊರಿಗೆ ಕರೆದುಕೊಂಡು ಹೋದರು. ಅಲ್ಲಿಯ ನಾಲ್ವತ್ತು ನಾಲ್ಕುಮಹಿಳೆಯರಿಗೆ 850 ರೂಪಾಯಿ ಕೊಟ್ಟರೆ ಅವರು ಸಾಲದಿಂದ ಮುಕ್ತರಾಗುತ್ತಿದ್ದರು .

ಆ ಮೇಲೆ ಅವರು ಈ ಮಹಿಳೆಯರಿಗೆ ಬ್ಯಾಂಕಿನ ಬಡ್ಡಿಯ ದರದಲ್ಲಿ ಸಾಲ ದೊರಕಿಸಿ ಅವರನ್ನು ಮಹಾಜೊನರ ರಿಣದಿಂದ ಮುಕ್ತ ಗೊಳಿಸಲು ಅಲ್ಲಿದ್ದ ಒಂದು ಹೆಸರಾದ ಬ್ಯಾಂಕಿಗೆ ಹೋದರು. ಈ ಸಾಲದ ಮೊತ್ತ ಇಷ್ಟು ಕಡಿಮೆ ಎಂಬುದನ್ನು ತಿಳಿದು ಅಲ್ಲಿಯ ಮ್ಯಾನೇಜರನು ನಗುನಗುತ್ತಲೇ ತನ್ನ ಅಸಮರ್ಥತೆಯನ್ನು ಪ್ರಕಟಿಸಿದನು. ಈ ಮಹಿಳೆಯರಿಗೆ ಓದಲು ಬರೆಯಲು ಕೂಡ ಬರುವದಿಲ್ಲ ಎಂಬುದನ್ನು ತಿಳಿದಾಗ ಬ್ಯಾಂಕಿನ ಪಾಲಿಗೆ ಅವರು ಶೂದ್ರರೇ ಸರಿ. ಬ್ಯಾಂಕು ಅವರ ಮೇಲೆ ನಂಬಿಕೆ ಇಡಲು ಒಪ್ಪಲಾರದು.

ಈ ಮಹಿಳೆಯರಿಗೂ ಕೂಡ ಇತರ ಬ್ಯಾಂಕ್ ಖಾತೇದಾರರಂತೆ ಸಮವಾದ ಹಕ್ಕುಗಳಿವೆ ಎಂಬುದರ ಮೇಲೆ ಮೊಹಮ್ಮದ್ ಇವರಿಗೆ ವಿಶ್ವಾಸ. ಬ್ಯಾಂಕು ಸಾಲ ಕೊಡಲು ಒಪ್ಪದಿದ್ದರೆ ಈ ಮಹಿಳೆಯರು ಒಳ್ಳೆಯ ಜೀವನವನ್ನು ಹೇಗೆ ಬಾಳಬೇಕು?



ಉಳಿದೆಲ್ಲ ಬ್ಯಾಂಕುಗಳನ್ನು ಸುತ್ತಾಡಿ ಬಂದ ಮೇಲೆ ಮೊಹಮ್ಮದ್ ಇವರು ಈ ಮಹಿಳೆಯರಿಗೆ ಸಾಲ ಕೊಡಲು ತಮ್ಮದೇ ಆದ ಒಂದು ಬ್ಯಾಂಕು ಪ್ರಾರಂಭಿಸಬೇಕು ಎಂದು ನಿರ್ಧರಿಸಿದರು. 1977ರಲ್ಲಿ ಗ್ರಾಮೀಣ ಬ್ಯಾಕ್ ಎಂಬ ಬ್ಯಾಂಕ್ ನ್ನು ಅವರು ಸ್ಥಾಪಿಸಿದರು.

ಗ್ರಾಮೀಣ ಬ್ಯಾಂಕಿನಿಂದ ಕಡಿಮೆ ಮೊತ್ತದ ಸಾಲವನ್ನು ಕಡಿಮೆ ಬಡ್ಡಿ ದರದ ಮೇಲೆ ಪಡೆಯಬಹುದು. ಈ ಚಿಕ್ಕ ಸಾಲಗಳನ್ನು ಮಾಯಕ್ರೋ ಕ್ರೆಡಿಟ್ ಎಂದು ಕರೆಯುತ್ತಾರೆ.

ಸಾಲ ಪಡೆಯುವವರಲ್ಲಿಯ ಐದೈದು ಸಾಲಗಾರರ ಒಂದೊಂದು ಗುಂಪು ಮಾಡಲಾಯಿತು. ಈ ಗುಂಪು ತಾವು ಪಡೆಯುವ ಸಾಲ ಮತ್ತು ಸಾಲ ತೀರಿಸುವ ಹೊಣೆಯನ್ನು ಹೊರುವದು. ಈ ರೀತಿಯಾಗಿ ಗುಂಪುಗಳಿಗೆ ಸಾಲ ಕೊಡುವದರಿಂದ ಕೊಟ್ಟ ಸಾಲವನ್ನು ತಿರುಗಿ ಮುಟ್ಟಿಸಲು ಗುಂಪಿನಲ್ಲಿಯ ಪ್ರತಿಯೊಬ್ಬರು ಪ್ರಯತ್ನ ಮಾಡುವರೆಂದು ಮೊಹಮ್ಮದ್ ಇವರ ಲೆಕ್ಕ.







ಮೊದಮೊದಲು ಮೊಹಮ್ಮದ್ ಮತ್ತು ಅವರ ವಿದ್ಯಾರ್ಥಿಗಳಿಗೆ ಈ ನಿರಕ್ಷರ ಮಹಿಳೆಯರನ್ನು ಇಂತಹ ಸಾಲದ ನಿಯಮಗಳಿಗೆ ಒಪ್ಪಿಸುವದು ಬಹಳ ಕಷ್ಟದ ಸಮಸ್ಯೆ ಎನ್ನಿಸ ತೊಡಗಿತು. ಈ ಮಹಿಳೆಯರಿಗೆ ಎಷ್ಟೊಂದು ತಿಳಿಸಿ ಹೇಳಿದರೂ ತಿಳಿಯುತ್ತಿರಲಿಲ್ಲ. ಮಹಾಜೋನನಂತಂಹ ಸಾಲ ಕೊಟ್ಟು ಸುಲಿಯುವ ಸಾಹುಕಾರರಿಗಿಂತ ಮೊಹಮ್ಮದ್ ಇವರ ಸಾಲ ಕೊಡುವ ರೀತಿ ಬೇರೆಯಾಗಿತ್ತು. ಕೆಲವು ಸಲ ಮೊಹಮ್ಮದ್ ಮತ್ತು ಅವನ ವಿದ್ಯಾರ್ಥಿಗಳಿಗೆ ಈ ಮಹಿಳೆಯರು ಧರಿಸುವ ಮೈತುಂಬ ಹೊದಿಕೊಳ್ಳುವ ಬುರಖಾ ಕೂಡ ಅಡ್ಡಿಯಾಗುತ್ತಿತ್ತು. ಏಕೆಂದರೆ ಪತಿಯ ಹೊರತಾಗಿ ಉಳಿದವರ ಜೊತೆ ಮಾತಾಡಲೂ ಕೂಡ ಅವರ ರೂಢಿಯಲ್ಲಿ ಅಪ್ಪಣೆ ಇರಲಿಲ್ಲ. ಮೊಹಮ್ಮದ್ ಇವರಿಗೆ ಮನೆಯಿಂದ ದೂರದಲ್ಲಿ ನಿಂತು ಅವರ ವಿದ್ಯಾರ್ಥಿನಿಗಳ ಮುಖಾಂತರ ಸಂಭಾಷಣೆ ಮಾಡಬೇಕಾಗುತ್ತಿತ್ತು. ಸಾರ್ವಜನಿಕ ಸ್ಥಳಗಳಲ್ಲಿ ಹೆಣ್ಣುಮಕ್ಕಳ ಜೊತೆ ಮಾತಾಡುವದು ಅಪರಾಧಕ್ಕೆ ಸರಿ. ಎಷ್ಟೋ ಸಲ ಬಿಸಿಲಲ್ಲಿ, ಸುರಿಯುವ ಮಳೆಯಲ್ಲಿ ಗಂಟೆಗಟ್ಟಲೆ ದಾರಿ ಕಾಯಬೇಕಾಗುತ್ತಿತ್ತು.




ಮೊಹಮ್ಮದ್ ಮತ್ತು ಅವರ ವಿದ್ಯಾರ್ಥಿಗಳ ತಾಳ್ಮೆ ಮತ್ತು ನಿರ್ಧಾರಗಳು ಫಲ ಕೊಡತೊಡಗಿದವು. ಅವರು ಈ ಮಹಿಳೆಯರ ವಿಶ್ವಾಸ ಗಳಿಸುವದರಲ್ಲಿ ಯಶಸ್ವಿಯಾಗತೊಡಗಿದರು. ಮಹಿಳೆಯರು ಗ್ರಾಮೀಣ ಬ್ಯಾಂಕಿನಿಂದ ಸಾಲ ಪಡೆಯುವದಕ್ಕಾಗಿ ಅರ್ಜಿಯ ಮೇಲೆ ಸಹಿ ಮಾಡತೊಡಗಿದರು.

ಬ್ಯಾಂಕಿನಲ್ಲಿಯ ತಮ್ಮ ಹಣದ ವ್ಯವಹಾರ ನೋಡಿಕೊಳ್ಳುವದರಲ್ಲಿ ಪಾರಂಗತರಾದರು. ಪ್ರತಿಯೊಂದು ಗುಂಪು ಏಳು ದಿನಗಳ ತರಬೇತಿ ಪಡೆದು ಬ್ಯಾಂಕಿನ ವ್ಯವಹಾರ ಹೇಗೆ ಮಾಡಬೇಕು ಎಂಬುದನ್ನು ತಿಳಿದುಕೊಳ್ಳುತ್ತಿದ್ದರು. ಮೊಹಮ್ಮದ್ ಇವರು ಅವರಿಗಾಗಿ ಯಾವಾಗಲು ನೆನಪಿನಲ್ಲಿಡಲು 16 ಪಾಠಗಳನ್ನು ರಚಿಸಿದ್ದರು. ಈ ಪಾಠಗಳಿಂದಾಗಿ ಆ ಮಹಿಳೆಯರ ಜೀವನದಲ್ಲಿ ಬದಲಾವಣೆಯಾಗತೊಡಗಿತು. ಸ್ವಚ್ಛ ನೀರು ಕುಡಿಯತೊಡಗಿದರು. ಮಕ್ಕಳಿಗೆ ಶಾಲೆಗೆ ಕಳುಹಿಸತೊಡಗಿದರು. ಬ್ಯಾಂಕಿನಿಂದ ಸಾಲ ಪಡೆಯುವಾಗ ಪ್ರತಿ ಗುಂಪಿನಲ್ಲಿಯ ಮಹಿಳೆಯರಿಗೆ ಕೆಲ ಕಸೋಟಿಗಳಲ್ಲಿ ತರಬೇತಿ ಪಡೆಯಬೇಕಾಗುತ್ತಿತ್ತು. ಈ ಮಹಿಳೆಯರು ಅಭ್ಯಾಸ ಮಾಡಿ ಅದರಲ್ಲಿ ಕೂಡ ಉತ್ತೀರ್ಣರಾಗುತ್ತಿದ್ದರು. ಈ ಕಸೋಟಿಗಳು ಮಹಿಳೆಯಯರಿಗೆ ಕೆಲ ಒಳ್ಳೆಯ ಪಾಠಗಳನ್ನು ಕಲಿಸಿದವು. ಸುಫಿಯಾನಂತಹ ನೊಂದ ಮಹಿಳೆಯರಿಗೆ ಒಂದು ನೂರು ರೂಪಾಯಿಯ ಸಾಲ ಪಡೆದಾಗ ಚಿನ್ನವೇ ದೊರೆತಂತೆ ಅವರು ಖುಶಿ ಪಡೆಯುತ್ತದ್ದದ್ದನ್ನು ಕಂಡು ಮೊಹಮ್ಮದ್ ಇವರಿಗೆ ಸಂತಸವಾಗುತ್ತಿತ್ತು.

ಸುಫಿಯಾ ತನಗೆ ದೊರೆತ ಸಾಲದ ತನ್ನ ಪಾಲಿನ ಹಣದಿಂದ ಸಿಹಿ ತಿಂಡಿಗಳಿಗೆ ಮತ್ತು ತಾನು ಮಾಡುವ ಬಳೆಗಳನ್ನು ಸಿಂಗರಿಸಲು ಬೇಕಾಗುವ ಪದಾರ್ಥಗಳನ್ನು ಕೊಂಡು ತಂದು ಇಂತಹ ವಸ್ತುಗಳನ್ನು ತನ್ನ ಬಿದಿರಿನ ವಸ್ತುಗಳ ಜೊತೆ ಮಾರಾಟಕ್ಕೆ ಇಡತೊಡಗಿದಳು. ಈಗ ಅವಳಿಗೆ ಮೊದಲಿಗಿಂತಲು ಹೆಚ್ಚಪ ಆದಾಯ ದೊರೆಯತೊಡಗಿತು. ತನ್ನ ಕುಟುಂಬದ ಆವಶ್ಯಕತೆಗಳನ್ನು ಪುರೈಸಿ ಉಳಿದ ಹಣದಿಂದ ಸಾಲ ಮುಟ್ಟಿಸತೊಡಗಿದಳು.

ಮೊಹಮ್ಮದ್ ಇವರಿಗೆ ತಮ್ಮ ಬಾಲ್ಯದ ದಿನಗಳಲ್ಲಿ ಮನೆಯ ಮುಂದೆ ಒಂದು ತುತ್ತು ಅನ್ನಕ್ಕಾಗಿ ಬಂದು ನಿಲ್ಲುವ ಮಹಿಳೆಯರ ನೆನಪಾಗುತ್ತಿತ್ತು. ತನ್ನ ಸ್ನಾವುಟ ದಿನಗಳಲ್ಲಿ ಚಿತ್ತಾಂಗ್ ವಿದ್ಯಾಪೀಠಕ್ಕೆ ಹೋಗುವಾಗ ಕೊಳಚೆಯಲ್ಲಿಯ ಗುಡಿಸಲುಗಳಲ್ಲಿ ವಾಸಿಸುವ ಜೋಬ್ರಾ ಊರಿನ ನೆನಪು ಮರುಕಳಿಸುತ್ತಿತ್ತು. ಅವರು ಅಲ್ಲಿಯೇ ಸುಫಿಯಾಳನ್ನು ಭೆಟ್ಟಿಯಾದದ್ದು. ಮೊಹಮ್ಮದ್ ಇವರಿಗೆ ಇಂತಹ ಬಡ ಜನರಿಗಾಗಿ ತಾವು ಏನಾದರೂ ಮಾಡಿದ್ದನ್ನು ನೆನಪಿಸಿ ನೆಮ್ಮದಿಯಾಗುತ್ತಿತ್ತು.



ಮೊಹಮ್ಮದ್ ಇವರನ್ನು ಬಡವರ ಬ್ಯಾಂಕರ್ ಎಂದು ಗುರುತಿಸಲಾಯಿತು. ಈ ಬ್ಯಾಂಕ್ ಕೆಲವೇ ವರುಷಗಳಲ್ಲಿ ಒಂದು ಕೋಟಿ ಡಾಲರದಷ್ಟು ಮೊತ್ತವನ್ನು 1 ಕೋಟಿ 20 ಲಕ್ಷ ಬಡವರಿಗೆ ತನ್ನ ಮೈಕ್ರೋ-ಕ್ರೆಡಿಟ್ ಯೋಜನೆಯ ಮುಖಾಂತರ ಸಾಲದ ರೂಪದಲ್ಲಿ ಕೊಟ್ಟಿತು. ಸಾಲ ತೆಗೆದುಕೊಂಡವರಲ್ಲಿ 94 ಪ್ರತಿಶತ ಮಹಿಳೆಯರಿದ್ದರು. 2006ರಲ್ಲಿ ಮೊಹಮ್ಮದ್ ಯುನುಸ್ ಮತ್ತು ಗ್ರಾಮೀಣ ಬ್ಯಾಂಕಿಗೆ ಒಟ್ಟಾಗಿ ನೋಬೆಲ್ ಪಾರಿತೋಷಕ ದೊರೆಯಿತು. ಇಡೀ ಜಗತ್ತಿನಲ್ಲಿಯೇ ಪ್ರತಿಷ್ಠೆ ಗಳಿಸಿದ ಈ ಪಾರಿತೋಷಕವನ್ನು ರಾಜಕೀಯ ಕಾರಣದಿಂದಾಗಿ, ಬಡತನದಿಂದಾಗಿ ಇಲ್ಲವೆ ಯುದ್ಧದಿಂದಾಗಿ ಬಳಲುತ್ತಿರುವ ರಾಷ್ಟ್ರಗಳಲ್ಲಿ ತಮ್ಮ ಧೈರ್ಯದಿಂದ ಶಾಂತಿಯನ್ನು ಪ್ರಸ್ಥಾಪಿಸುವ ವ್ಯಕ್ತಿ ಇಲ್ಲವೆ ಗುಂಪಿಗೆ ಕೊಡಲಾಗುತ್ತದೆ. ನೋಬೆಲ್ ಪಾರಿತೋಷಕ ಸಮೀತಿಯು ಪಾರಿತೋಷಕ ಕೊಡುವಾಗ ಗ್ರಾಮೀಣ ಬ್ಯಾಂಕ್ ಮತ್ತು ಮೊಹಮ್ಮದ್ ಯುನುಸ್ ಇವರು ತಮ್ಮ ದೇಶದ ರಾಜಕೀಯ ಮತ್ತು ಸಾಮಾಜಿಕ ವಿಕಾಸವನ್ನು ತಮ್ಮ ಸಮಾಜದ ಕೆಳಗಿನ ಸ್ತರದಲ್ಲಿರುವ ಬಡ ಜನರಿಂದ ಪ್ರಾರಂಭಿಸಿದರು ಎಂದು ಹೊಗಳಿತು. ಇದರಿಂದಾಗಿ ಬಡವರಲ್ಲಿಯ ಬಡವ ಕೂಡ ತನ್ನ ವಿಕಾಸ ಮಾಡಿಕೊಳ್ಳಲು ಸಾಧ್ಯ ವಾಯಿತು.







ಈ ಪಾರಿತೋಷಕ ಪಡೆಯುವಾಗಿನ ಸಮಾರಂಭದಲ್ಲಿ ಈ ಪಾರಿತೋಷಕವನ್ನು ಜಗದಲ್ಲಿಯ ಕೋಟಿಗಟ್ಟಲೆ ತಮ್ಮ ಪ್ರತಿದಿನದ ಜೀವನಕ್ಕಾಗಿ ಕಷ್ಟ ಪಡುತ್ತಿರುವ ಮತ್ತು ಅವರಲ್ಲಿ ಆಸೆಯ ಚಿಗುರನ್ನು ಮೂಡಿಸಲೆದು ಕೊಡಲಾಗಿದೆ. ಇದು ಒಂದು ಐತಿಹಾಸಿಕ ಕ್ಷಣ ಇವರ ಮಕ್ಕಳ ಉಜ್ವಲ ಭವಿಷ್ಯವು ಇದರಲ್ಲಿ ಅಡಗಿದೆ, ಎಂದು ಮೊಹಮ್ಮದ್ ಯುನುಸ್ ತಮ್ಮ ಭಾಷಣದಲ್ಲಿ ಹೇಳಿದರು.

ಓರ್ವ ಮಹಿಳೆಯ 20-25 ರೂಪಾಯಿ ಸಾಲ ಮುಟ್ಟಿಸಲೆಂದು ಪ್ರಾರಂಭಿಸಿದ ಮಾಯಕ್ರೊ ಕ್ರೆಡಿಟ್ ದ ಕೋಟ್ಯಾನುಗಟ್ಟಲೆ ಡಾಲರದ ವ್ಯವಹಾರ ಮಾಡುತ್ತಿರುವ ಈ ಬ್ಯಾಂಕಿನ ಮೊಹಮ್ಮದ್ ಯುನುಸ್ ಇವರು ಈಗಲೂ ಕೂಡ ಬಡವರಿಗಾಗಿ ಹೋರಾಡುತ್ತಿದ್ದಾರೆ. ಈ ಜಗತ್ತಿನಲ್ಲಿ ಯಾವ ಹೆಂಗಸು, ಗಂಡಸು ಇಲ್ಲವೆ ಮಗು ಬಡತನದಿಂದಾಗಿ ಬರಿ ಹೊಟ್ಟೆಯಲ್ಲಿ ಮಲಗಕೂಡದು ಎಂಬ ಹೊಸ ಜಗತ್ತಿನ ಕನಸನ್ನು ಅವರು ಕಾಣುತ್ತಿದ್ದಾರೆ.



ಹಿನ್ನುಡಿ

ಮೊಹಮ್ಮದ್ ಯುನುಸ್ ಇವರ ಬಾಂಗ್ಲಾದೇಶದ ಬ್ಯಾಂಕಿನ ಯಶಸ್ಸಿನ ಅನುಭವ ಕಂಡು ರಶಿಯಾ, ಇಸ್ರಾಇಲ್, ಇಜಿಪ್ತ, ಘಾನಾ, ಚೀನ, ಫಿಲಿಪಾಇನ್ಸ, ಸೌದಿ ಅರೇಬಿಯಾ ಮುಂತಾದ ದೇಶಗಳು ಕೂಡ ಮಾಯಕ್ರೋ ಕ್ರೆಡಿಟ್ ದಂತಹ ಯೋಜನೆಗಳನ್ನು ತಮ್ಮ ತಮ್ಮ ದೇಶಗಳಲ್ಲಿ ಪ್ರಾರಂಭಿಸಿದರು. ಜಗತ್ತಿನಲ್ಲಿಯ 97 ಪ್ರತಿಶತದಷ್ಟು ಗ್ರಾಮೀಣ ಬ್ಯಾಂಕಿನ ಗ್ರಾಹಕರು ತಾವು ತೆಗೆದು ಕೊಂಡ ಸಾಲವನ್ನು ಮುಟ್ಟಿಸುತ್ತಿದ್ದರು. ಶಿಕ್ಷಣ ಮುಂದುವರಿಸಲೆಂದು ಜಗತ್ತಿನಲ್ಲಿಯ ವಿದ್ಯಾರ್ಥಿಗಳಿಗಾಗಿ ಗ್ರಾಮೀಣ ಬ್ಯಾಂಕ್ 180000 ಶಿಷ್ಯವೃತ್ತಿಗಳನ್ನು ಹಂಚುತ್ತಿತ್ತು.
2008ರಲ್ಲಿ ಅಮೇರಿಕೆ ಕೂಡ ಈ ಬ್ಯಾಂಕ್ ಪ್ರವೇಶಿಸಿತು. 2013ರಲ್ಲಿ ನ್ಯೂಯಾರ್ಕದಲ್ಲಿ ಇದರ ಒಂದು ಶಾಖೆ ಕೆಲಸ ಮಾಡತೊಡಗಿತು. ಉತ್ತರ ಕ್ಯರೋಲಿನಾ, ಇಂಡಿಯಾನಾ, ನೆಬ್ರಾಸ್ಕಾ, ಕ್ಯಾಲಿಫೋರ್ನಿಯಾ ಮುಂತಾದ ಅಮೇರಿಕಾದ ರಾಜ್ಯಗಳಲ್ಲಿಯ 46000 ಮಹಿಳೆಯರಿಗೆ 10 ಕೋಟಿ ಡಾಲರದಷ್ಟು ಹಣವನ್ನು ಸಾಲವೆಂದು ಕೊಟ್ಟಿತು. ಅಮೇರಿಕೆಯಲ್ಲಿಯ ಬಡವರನ್ನು ಆರ್ಥಿಕವಾಗಿ ಸ್ವತಂತ್ರರಾಗಲು ಈ ಬ್ಯಾಂಕ್ ಸಹಾಯಮಾಡತೊಡಗಿತು.



2011ರಲ್ಲಿ ಬಾಂಗ್ಲಾದೇಶದ ಶಾಸನವು ಮೊಹಮ್ಮದ್ ಯುನುಸ್ ಇವರನ್ನು ಆ ದೇಶದ ವಯಸ್ಸಿನ ಬಗ್ಗೆ ಇರುವ ಕಾನೂನುಗಳ ಮೇರೆಗೆ ಬ್ಯಾಂಕಿನ ಕೆಲಸದಿಂದ ವಜಾ ಮಾಡಿತು. ಈಗ ಅವರು ತಾವೇ ಸ್ಥಾಪಿಸಿದ ಗ್ರಾಮೀಣ ಕ್ರಿಯೇಟಿವ್ರ ಕ್ಲಬ್ಬಿನ ಮತ್ತು ಯುನುಸ್ ಕೇಂದ್ರದ ಮುಖ್ಯಸ್ಥರಾಗಿ ಕೆಲಸ ಮಾಡುತ್ತಿದ್ದಾರೆ.

ಇವರು ಸ್ಥಾಪಿಸಿದ ಈ ಎರಡೂ ಸಂಸ್ಥೆಗಳು ಬಡವರಿಗಾಗಿ ದುಡಿಯುತ್ತಲಿವೆ. ಶಿಕ್ಷಣ, ಆರೋಗ್ಯ, ಪೋಷಕ ಆಹಾರ, ಪರಿಸರ ರಕ್ಷಣೆ ಮುಂತಾದ ಸಾಮಾಜಿಕ ವಿಷಯಗಳಲ್ಲಿ ಆಸಕ್ತಿ ವಹಿಸಿ ಕೆಲಸ ಮಾಡುತ್ತಲಿವೆ. ಯುನುಸ್ ಇವರು ಬಾಂಗ್ಲಾದೇಶದಲ್ಲಿ ತಮ್ಮ ಪತ್ನಿ, ಅಫ್ರೋಜಿ ಬೇಗಮ್ ಮತ್ತು ಕಿರಿ ಮಗಳು ದೀನಾ ಇವಳ ಜೊತೆ ವಾಸಿಸುತ್ತಿದ್ದಾರೆ. ಮೋನಿಕಾ ಎಂಬ ಹಿರಿ ಮಗಳು ನ್ಯೂಯಾರ್ಕದಲ್ಲಿಯ ಆಪೇರಾದ ತಂಡದಲ್ಲಿ ಸಂಗೀತ ನುಡಿಸುತ್ತಾರೆ.
ನೋಬೆಲ್ ಪಾರಿತೋಷಕದ ಹೊರತಾಗಿ ಅವರನ್ನು 1994ರಲ್ಲಿ World Food Prize, 1908ರಲ್ಲಿ Sydney Peace Prize, 2009 ರಲ್ಲಿ ಅಮೇರಿಕೆಯ Presidential Medal of Freedom ಮತ್ತು 2010ರಲ್ಲಿ Congressional Gold Medal ದಿಂದ ಗೌರವಿಸಲಾಯಿತು. ಅರ್ಥಶಾಸ್ತ್ರ ಮತ್ತು ದಾರಿದ್ರ್ಯ ನಿರ್ಮೂಲನಕ್ಕಾಗಿ ಮಾಡಿದ ಅವರ ಕಾರ್ಯವನ್ನು ಗುರುತಿಸಿ 48 ವಿಶ್ವ ವಿದ್ಯಾಲಯಗಳು ಗೌರವಪರ ಡಾಕ್ಟರೇಟ ಪದವಿಯನ್ನು ಅವರಿಗೆ ಕೊಟ್ಟವೆ.



ನಾನು ನನ್ನ ಸುತ್ತಮುತ್ತಲಿದ್ದ ಬಡವರಿಗಾಗಿ
ತಕ್ಷಣ ಸಹಾಯ ಮಾಡಲು ಬಯಸುತ್ತಿದ್ದೆ.
ಓರ್ವ ಮನುಷ್ಯನಾದರೂ ಸರಿ, ಆತ
ಮತ್ತೊಂದು ದಿನ ಬದುಕಿರಬೇಕು ಎಂದು
ನನಗೆ ಅನ್ನಿಸುತ್ತದೆ.

- ಮೊಹಮ್ಮದ್ ಯುನುಸ್